ಆ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ನೇಸರ್ಗಿ ಗ್ರಾಮದಲ್ಲಿ ಸರ್ಕಾರಿ ಐ.ಟಿ.ಐ ಪ್ರಾರಂಭಿಸಲು ಯಾವ ಕ್ರಮ ಕೈಗೊಂಡಿರುವರು;

ಆ) ಈ ಐ.ಟಿ.ಐ ಕಾಲೇಜನ್ನು ಎಷ್ಟು ದಿನಗಳಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಬ್ಲೇಸಿಯಸ್ ಎಂ.ಡಿಸೋಜ

(ಕಾರ್ಮಿಕ ಸಚಿವರು)

ಮಲೆನಾಡಿನ ಅಭಿವೃದ್ಧಿ ಮಂಡಲಿಯ ವತಿಯಿಂದ ಪ್ರಾರಂಭಿಸಲು ಪರಿಶೀಲಿಸಲಾಗುತ್ತಿದೆ. ಇದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ವಿಷಯ :- ರೇಷ್ಮೆ ಗೂಡಿನ ಮಾರುಕಟ್ಟೆ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 157(96)

ಶ್ರೀ ಎ.ಟಿ.ರಾಮಸ್ವಾಮಿ(ಅರಕಲಗೂಡ)

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರೇಷ್ಮೆ ಗೂಡಿನ ಧಾರಣೆಯು ಅಸಮರ್ಪಕ ಏರಿಳಿತವಾಗುತ್ತಿದ್ದುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ರೇಷ್ಮೆ ಗೂಡಿನ ಬೆಳೆಗಾರರಿಗೆ ಸಮರ್ಪಕವಾಗಿ ಸ್ಥಿರವಾದ ಬೆಲೆ ಒದಗಿಸಲು ಸರ್ಕಾರ ತೆಗೆದುಕೊಂಡು ಕ್ರಮಗಳೇನು?

ಡಾ ಜಿ.ಪರಮೇಶ್ವರ

(ರೇಷ್ಮೆ ರಾಜ್ಯ ಸಚಿವರು)

ಹೌದು

ರೇಷ್ಮೆ ಗೂಡಿನ ಗುಣಮಟ್ಟಕ್ಕೆ ತಕ್ಕ ಬೆಲೆ ಒದಗಿಸಲು ಸರ್ಕಾರಿ ಗೂಡಿನ ಮಾರುಕಟ್ಟೆಗಳಲ್ಲಿ ಬಹಿರಂಗ ಹರಾಜನ್ನು ಆಚರಣೆಗೆ ತರಲಾಗಿದೆ. ಇದರಿಂದಾಗಿ ರಾಜ್ಯದ ಎಲ್ಲಾ ರೈತರು ಮತ್ತು ರೀಲರ್‌ಗಳು ಸರ್ಕಾರಿ ಗೂಡಿನ ಮಾರುಕಟ್ಟೆಗಳಲ್ಲಿ ಭಾಗವಹಿಸಿ ವಹಿವಾಟು ಮಾಡುವುದರಿಂದ ಗುಣಮಟ್ಟದ ಗೂಡನ್ನು ಪಡೆಯಲು ಯಾರೇ ಆಗಲಿ ಅತಿ ಹೆಚ್ಚಿನ ಬೆಲೆಯನ್ನು ಬಹಿರಂಗ ಹರಾಜಿನಲ್ಲಿ ಸೂಚಿಸಬೇಕಾಗುತ್ತದೆ. ಇದರಿಂದಾಗಿ ಗೂಡಿನ ಗುಣಕ್ಕೆ ತಕ್ಕ ಸಮರ್ಪಕ ಬೆಲೆ ದೊರೆಯುತ್ತಿದೆ. ಈ ಬಗ್ಗೆ ಅಧಿಕಾರಿಗಳ ಒಂದು ಸಮಿತಿಯು ಸರ್ಕಾರದ ಮಟ್ಟದಲ್ಲಿ ನೇಮಕಾವಾಗಿದ್ದು ಸೂಕ್ತಾ ಸುಕ್ತತೆಗಳನ್ನು ಪರಿಶೀಲಿಸಲಾಗುತ್ತಿದೆ.

ವಿಷಯ :- ರೇಷ್ಮೆ ಇಲಾಖೆಯಲ್ಲಿ ಹಣ ದುರುಪಯೋಗ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ 158(419)

ಶ್ರೀ ಕೆ.ಎಂ. ಪುಟ್ಟು(ಕಿರುಗಾವಲು)

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಮಂಡ್ಯದ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಯಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ದುರುಪಯೋಗವಾಗಿರುವ ಮೊತ್ತವೆಷ್ಟು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು?

ಡಾ.ಜಿ. ಪರಮೇಶ್ವರ

(ರೇಷ್ಮೆ ರಾಜ್ಯ ಸಚಿವರು)

ಬಂದಿದೆ.

ಸುಮಾರು ರೂ. 1,24,504-00 ಗಳು ಅವ್ಯವಹಾರಗಳು ನಡೆದಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿ : ನೌಕರರುಗಳ ವಿರುದ್ಧ ಸಿ.ಸಿ.ಎ. ನಿಯಮಾವಳಿಯ ನಿಯಮಗಳ ಅನುಸಾರವಾಗಿ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲಾಗುತ್ತಿದೆ. ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಿಷಯ : – ಹೊಳೆನರಸೀಪುರದಲ್ಲಿ ಗ್ರೈನೇಜ್ ಕಟ್ಟಡದ ನಿರ್ಮಾಣದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 159(81)

ಶ್ರೀ ಜಿ.ಪುಟ್ಟಸ್ವಾಮಿ ಗೌಡ(ಹೊಳೆನರಸೀಪುರ)

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಳೆನರಸೀಪುರದಲ್ಲಿ ರೇಷ್ಮೆ ಇಲಾಖೆಯಿಂದ ಗ್ರೈನೇಜ್ ಕಟ್ಟಡದ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭಿಸಲಾಯಿತು ಹಾಗೂ ಈ ಕಟ್ಟಡದ ಅಂದಾಜು ವೆಚ್ಚ ಎಷ್ಟು?

ಆ) ಈ ಕಟ್ಟಡದ ನಿರ್ಮಾಣಕ್ಕೆ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು?

ಇ) 1993-94ರಲ್ಲಿ ಎಷ್ಟು ಹಣವನ್ನು ಈ ಕಾಮಗಾರಿಗೆ ಬಿಡುಗಡೆ ಮಾಡಲಾಗುವುದು.

ಈ) ಈ ಕಟ್ಟಡದ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಡಾ. ಜಿ.ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು)

ಹೊಳೆನರಸೀಪುರದಲ್ಲಿ ರೇಷ್ಮೆ ಇಲಾಖೆ ಗ್ರೈನೇಜ್ ಕಟ್ಟಡ ನಿರ್ಮಾಣದ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಕಟ್ಟಡ ನಿರ್ಮಾಣದ ಅಂದಾಜು ವೆಚ್ಚ ಸುಮಾರು ರೂ.15.00 ಲಕ್ಷಗಳು.

ಉದ್ಭವಿಸುವುದಿಲ್ಲ.

ಆಡಳಿತಾತ್ಮಕ ಮಂಜೂರಾತಿಯಾದ ನಂತರ ಕಟ್ಟಡದ ಅಂದಾಜು ವೆಚ್ಚದ 1/3 ಭಾಗವನ್ನು ಬಿಡುಗಡೆ ಮಾಡಲಾಗುವುದು.

ಮಂಜೂರಾದ ನಂತರ ಶೀಘ್ರವಾಗಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ : – ಹೊಳೆನರಸೀಪುರದಲ್ಲಿ ಬೀಡಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ

ಪ್ರಶ್ನೆ ಸಂಖ್ಯೆ (ಚುಕ್ಕೆ ಗುರುತಿಲ್ಲದ) 160(82)

ಶ್ರೀ ಜಿ.ಪುಟ್ಟಸ್ವಾಮಿ ಗೌಡ(ಹೊಳೆನರಸಿಪುರ)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಳೆನರಸೀಪುರದಲ್ಲಿ ಬೀಡಿಕಾರ್ಮಿಕರಿಗೆ 500 ಮನೆಗಳನ್ನು ನಿರ್ಮಿಸಲು ಸರ್ಕಾರ ನಿರ್ಧರಿಸಿದೆಯೇ?

ಆ)ಹಾಗಿದ್ದಲ್ಲಿ, ಕರ್ನಾಟಕ ಗೃಹ ಮಂಡಳಿಯವರಿಗೆ ಭೂಸ್ವಾಧೀನ ಕ್ರಮವನ್ನು ಕೈಗೊಂಡು ಮನೆಗಳನ್ನು ನಿರ್ಮಿಸಲು ಆದೇಶ ನೀಡಲಾಗಿದೆಯೇ?

ಇ) ಇಲ್ಲಿಯವರಗೆ ಸರ್ಕಾರವು ಈ ಮನೆಗಳನ್ನು ನಿರ್ಮಿಸಲು ಎಷ್ಟು ಹಣ ಖರ್ಚು ಮಾಡಿದೆ?

ಈ) ಈ ನಿರ್ಮಾಣ ಕಾರ್ಯ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?